**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಪ್ರಾಸಾ- 7
ಚಾಸಾ- 13

| | | |
|---|---|---|
| ಸಾಕ್ಷಿದಾರರ ಹೆಸರು | : | ಮುನೀರ್ |
| ತಂದೆಯ ಹೆಸರು | : | ಬಶೀರ್ |
| ವಯಸ್ಸು | : | 40 ವರ್ಷ |
| ವೃತ್ತಿ | : | ಚಾಲಕ |
| ವಾಸ | : | ಕುಶಾಲನಗರ. |

**ಸಾಕ್ಷಿಯನ್ನು ದಿನಾಂಕ 21-12-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಾನು ಕುಶಾಲನಗರದ ಡಿ.ವೈ.ಎಸ್.ಪಿ ಕಛೇರಿಯಲ್ಲಿ ಕಳೆದ 4 ವರ್ಷಗಳ ಮೊದಲು ಹಾಕಿದ್ದೆನು. ಆ ದಿನ ಸಂಜೆ 5 ಗಂಟೆ ಸಮಯಕ್ಕೆ ನಾನು ಆಟೋ ನಿಲ್ದಾಣದಲ್ಲಿ ಇದ್ದಾಗ ಪೊಲೀಸರು ನನ್ನನ್ನು ಡಿ.ವೈ.ಎಸ್.ಪಿ.ಕಛೇರಿಗೆ ಕರೆದರು ನಾನು ಅಲ್ಲಿಗೆ ಹೋದೆನು ಅಲ್ಲಿ ಡಿ.ವೈ.ಎಸ್.ಪಿ ರವರು ಇದ್ದರು. ಒಬ್ಬ ಪೊಲೀಸ್ ಡಿ.ವೈ.ಎಸ್.ಪಿ ಎದುರು ಒಂದು ರಕ್ತ ಮಿಶ್ರಿತ ಬಿಳಿ ಬಣ್ಣದ ಟಿ-ಶರ್ಟ್ಟು, ಒಂದು ಎಡ ಎದೆಯ ಬಳಿ ತೂತಾದ ಒಂದು ಲೆದರ್ ಜರ್ಕಿನ್ ಒಂದು ರಕ್ತ ಮಿಶ್ರಿತ ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ಹಾಜರುಪಡಿಸುವ ಸಂದರ್ಭದಲ್ಲಿ ಮತ್ತು ಒಂದು ಚಿಲ್ಲುಗಳನ್ನು ತುಂಬಿದ ಪ್ಲಾಸ್ಟಿಕ್ ಡಬ್ಬವನ್ನು ಹಾಜರುಪಡಿಸುವ ಸಂದರ್ಭದಲ್ಲಿ ಮಹಜರ್ ತಯಾರಿಸಿ ಸದರಿ ಮಹಜರ್ ಗೆ ನನ್ನ ಸಹಿ ತೆಗೆದುಕೊಂಡರು. ಈಗ ನಾನು ನೋಡುತ್ತಿರುವ ಮಹಜರ್ ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಆಗಿದ್ದು, ಅದನ್ನು **ನಿಪಿ-6** ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು.

ಸುಜೀತ್ ಎಂಬುವವರಿಗೆ ಗುಂಡು ಹೊಡೆದ ಸಂದರ್ಭದಲ್ಲಿ ಅವರು ಧರಿಸಿದ್ದ ಬಟ್ಟೆಗಳನ್ನು ಪೊಲೀಸರು ಹಾಜರುಪಡಿಸಿದ್ದರು. ನಿಪಿ-6 ರ ಸಂದರ್ಭದಲ್ಲಿ ಪೊಲೀಸರು

ಫೋಟೊಗಳನ್ನು ತೆಗೆದಿದ್ದು, ಸದರಿ 4 ಫೋಟೋಗಳನ್ನು ಒಟ್ಟಾಗಿ **ನಿಪಿ-7** ಎಂದು ಗುರುತಿಸಲಾಯಿತು. ನಿಪಿ-7 ರ ಫೋಟೊಗಳಲ್ಲಿ ನಾನು ಇದ್ದೇನೆ. ಪೊಲೀಸರು ಸದರಿ ಬಟ್ಟೆಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಮಾಡಿ ಅದರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದರು.

ಪೊಲೀಸರು ಹಾಜರುಪಡಿಸಿದ ಬಟ್ಟೆಗಳು ಹಾಗೂ ಚಿಲ್ಲುಗಳನ್ನು ಒಳಗೊಂಡ ಪ್ಲಾಸ್ಟಿಕ್ ಡಬ್ಬವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಟ್ಟೆಗಳನ್ನು ಈಗಾಗಲೇ ಮು.ಮಾ-2, ಮು.ಮಾ-3 ಹಾಗೂ ಮು.ಮಾ-4 ಎಂದು ಈಗಾಗಲೇ ಗುರುತಿಸಲಾಗಿದೆ ಮತ್ತು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸೀಲಾದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

ಈಗ ನಾನು ನೋಡುತ್ತಿರುವ ಚಿಲ್ಲುಗಳನ್ನು ಒಳಗೊಂಡ ಪ್ಲಾಸ್ಟಿಕ್ ಡಬ್ಬವನ್ನು ಪೊಲೀಸರು ನನ್ನ ಸಮಕ್ಷಮದಲ್ಲಿ ಹಾಜರುಪಡಿಸಿದ್ದು, ಅದನ್ನು **ಮು.ಮಾ-5** ಎಂದು ಗುರುತಿಸಲಾಯಿತು. ಮು.ಮಾ-3 ರಿಂದ ಮು.ಮಾ-5 ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ.

**<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ.ಎ.ಜಿ.ಜಿ., ವಕೀಲರಿಂದ:</u>**

ನಾನು ಕುಶಾಲನಗರದಲ್ಲಿ ವಾಸಿಸುತ್ತೇನೆ. ನಾನು ಕುಶಾಲನಗರ ಡಿವೈಎಸ್ ಪಿ ಕಛೇರಿಗೆ ಹೋಗಿದ್ದೇನೆ. ಪೊಲೀಸರು ನನಗೆ ಸುಜೀತ್ ಎಂಬುವವರಿಗೆ ಗುಂಡು ಹೊಡೆದಿದ್ದ ವಿಚಾರವನ್ನು ಹೇಳಿದ್ದರು. ನನಗೆ ವೈಯಕ್ತಿವಾಗಿ ಗುಂಡು ಹೊಡೆದಿದ್ದಾರೆ ಎಂಬ ವಿಷಯ ಗೊತ್ತಿಲ್ಲ. ಟಿ-ಶರ್ಟಿನ ಎಡ ಎದೆಯ ಭಾಗದಲ್ಲಿ ರಕ್ತದ ಕಲೆಗಳು ಇದ್ದವು. ಸದರಿ ಟಿ-ಶರ್ಟಿನಲ್ಲಿ ಎಷ್ಟು ತೂತುಗಳು ಮತ್ತು ಅಗಲದ ತೂತುಗಳು ಇದ್ದವು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಹೇಳಿದ ಭಾಗದಲ್ಲಿ ಟಿ-ಶರ್ಟಿನಲ್ಲಿ ತೂತುಗಳು ಕಾಣುತ್ತಿಲ್ಲ ಎಂದರೆ ಸರಿ. ಆ ದಿನ ನನಗೆ ನ್ಯಾಯಾಲಯದ ಎದುರು ಇರುವ ಟಿ-ಶರ್ಟನ್ನೇ ತೋರಿಸಿದ್ದರು. ನಾನು ನೋಡಿದಾಗ ಸದರಿ ಟಿ-ಶರ್ಟಿನಲ್ಲಿ ಯಾವ ಮಾರ್ಕುಗಳು ಇದ್ದವು ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

ಸದರಿ ಮಹಜರ್ ಅನ್ನು ನಾನು ಓದಿ ನೋಡಿಲ್ಲ ಆದರೆ ಪೊಲೀಸರು ನನಗೆ ಓದಿ ಹೇಳಿದ್ದಾರೆ. ಟಿ-ಶರ್ಟಿನ ಮುಂಭಾಗದಲ್ಲಿ ಬೇರೆ ಏನಾದರೂ ಬರೆದಿದ್ದರೋ ಎಂಬ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಈಗ ನಾನು ನ್ಯಾಯಾಲಯದ ಎದುರು ನೋಡುತ್ತಿರುವ ಟಿ-ಶರ್ಟಿನಲ್ಲಿ ನಾಲ್ಕು ತೂತುಗಳು ಇವೆ ಎಂದರೆ ಸಾಕ್ಷಿ ಮಹಜರ್ ಆಗಿ 4 ವರ್ಷಗಳು ಆದ

ಕಾರಣ ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ಇದೆ ಟಿ-ಶರ್ಟನ್ನು ನನಗೆ ತೋರಿಸಿದ್ದರೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜರ್ಕಿನ್ ನಲ್ಲಿ ಎಷ್ಟು ತೂತುಗಳು ಇದ್ದವು ಎಂದು ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ, ಏಕೆಂದರೆ ಮಹಜರ್ ಆಗಿ 4 ವರ್ಷಗಳು ಆಗಿದ್ದವು. ಪ್ಯಾಂಟಿನ ಎಡ ತೊಡೆಯ ಬಳಿ ಕಿಸೆಯಿಂದ ಕೆಳಗೆ ರಕ್ತದ ಕಲೆಗಳು ಇದ್ದವು. ಯಾವ ಕಂಪನಿಯ ಜೀನ್ಸ್‌ಪ್ಯಾಂಟು ಎಂದು ನನಗೆ ಗೊತ್ತಿಲ್ಲ. ಇದೆ ಜೀನ್ಸ್‌ಪ್ಯಾಂಟನ್ನೇ ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದಾರೆ ಎನ್ನಲು ಯಾವುದಾರೋ ಗುರುತು ಇದೆ ಎಂದರೆ ಸಾಕ್ಷಿ ಅಮಾನತ್ತು ಪಡಿಸಿಕೊಂಡ ನಂತರ ಅದನ್ನು ಪ್ಯಾಕ್ ಮಾಡುವ ವರಗೂ ನಾನು ಅಲ್ಲಿಯೇ ಇದ್ದೆ ಆ ಕಾರಣದಿಂದ ಅದೇ ಜೀನ್ಸ್ ಪ್ಯಾಂಟನ್ನೇ ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮು.ಮಾ-4 ರಂತ ಜೀನ್ಸ್ ಪ್ಯಾಂಟುಗಳು ಮಾರ್ಕೇಟಿನಲ್ಲಿ ಬೇಕಾದಷ್ಟು ಸಿಗುತ್ತವೆ ಎಂದರೆ ಸರಿ. ಪ್ರತಿಯೊಂದು ಜೀನ್ಸ್ ಪ್ಯಾಂಟಿಗೆ ಅದರದ್ದೆ ಆದ ಹೆಸರು ಇರುತ್ತದೆ ಎಂದರೆ ಅದನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಮು.ಮಾ-5 ಪ್ಲಾಸ್ಟಿಕ್ ಡಬ್ಬದಲ್ಲಿ 6 ಚಿಲ್ಲುಗಳು ಇದ್ದವು. ಅದರಲ್ಲಿ 6 ಚಿಲ್ಲುಗಳು ಇದ್ದವು ಎಂದು ನನಗೆ ಪೊಲೀಸರು ಹೇಳಿದ್ದರು. ಮು.ಮಾ-2 ರಿಂದ ಮು.ಮಾ-5 ರ ವಸ್ತುಗಳನ್ನು ಪೊಲೀಸರು ಆಸ್ಪತ್ರೆಯಿಂದ ತಂದಿದ್ದರು. ನಾನು ನೋಡಿದಾಗ ಸದರಿ ಬಟ್ಟೆಗಳು ಹಾಗೂ ಚಿಲ್ಲುಗಳು ಟೇಬಲ್ ಮೇಲೆ ಇತ್ತು ಮತ್ತು ಅದು ಯಾವ ರೀತಿ ಪ್ಯಾಕ್ ಹಾಕಿದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನನ್ನ ಎದುರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಪರಿಚಯದ ಮೇರೆಗೆ ನಾನು ಮಹಜರ್ ಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ